# ವಿಚಾರ ಲಹರಿ

ಶ್ರೀ ರಾಮಕೃಷ್ಣ ಪರಮಹಂಸರ ಜೀವನದಲ್ಲಿ ನಡೆದ ಒಂದು ಘಟನೆ, ಅವರ ಪೂರ್ವಾಶ್ರಮದ ಹೆಸರು ಗದಾಧರ. ಗದಾಧರನಿಗೆ ಆರು ವರ್ಷವಿದ್ದಾಗ ಒಂದು ದಿನ ಆತ ಹುರಿಗಡಲೆ ಮೆಲ್ಲುತ್ತಾ ಹುಲುಸಾಗಿ ಬೆಳೆದಿದ್ದ ಭತ್ತದ ಗದ್ದೆಯ ನಡುವಿನ ಕಿರುದಾರಿಯಲ್ಲಿ ನಡೆದು ಹೋಗುತ್ತಿದ್ದ. ಹುರಿಗಡಲೆ ಆಗಿಯುತ್ತಲೇ ಏಕೋ ತಲೆಯೆತ್ತಿ ಆಕಾಶದ ಕಡೆ ನೋಡಿದ. ದೂರದ ದಿಗಂತದಲ್ಲೊಂದು ಬೃಹದಾಕಾರದ ಕಪ್ಪು ಮೋಡವಿತ್ತು. ಬಾಲಕ ಗದಾಧರ ಅದನ್ನೇ ದಿಟ್ಟಿಯಿಟ್ಟು ನೋಡುತ್ತಿದ್ದ. ನೋಡ ನೋಡುತ್ತಿದ್ದಂತೆ ಆ ಮೋಡ ಮೇಲೇರುತ್ತಾ ಬಂದು ಬಹುಪಾಲು ಆಕಾಶವನ್ನೇ ವ್ಯಾಪಿಸಿಬಿಟ್ಟಿತು. ಪಕ್ಕದ ಗದ್ದೆಯಲ್ಲಿ ಕುಳಿತಿದ್ದ ಬೆಳ್ಳಕ್ಕಿಗಳು ಇದ್ದಕ್ಕಿದ್ದಂತೆ ಗುಂಪುಗುಂಪಾಗಿ ಮೇಲೆ ಚಿಮ್ಮಿ ಆಕಾಶದಲ್ಲಿ ಹಾರ ತೊಡಗಿದವು. ಮೇಲೆ ಕಪ್ಪು ಮೋಡ, ಕೆಳಗೆ ಬಿಳಿಯ ಹಕ್ಕಿಗಳು ಸಾಲು! ಹೀಗೆ ಕರಿಯ ಮೋಡದ ಹಿನ್ನೆಲೆಯಲ್ಲಿ ಬೆಳ್ಳಕ್ಕಿಗಳು ಹಾರಿದ ಪರಿಣಾಮವಾಗಿ ಒಂದು ವಿಚಿತ್ರ ರೇಖಾ ವಿನ್ಯಾಸ ಮೂಡುವಂತಾಯಿತು. ಇಂಥ ಅಪೂರ್ವ ದೃಶ್ಯ ಬಾಲಕ ಗದಾಧರನಲ್ಲಿ ಒಂದು ಬಗೆಯ ಭಾವೋದ್ರೇಕವನ್ನು ಉದ್ದೀಪಿಸಿತು. ಆತ ಪ್ರಜ್ಞೆತಪ್ಪಿ, ಏಕಾ ಏಕಿ ಕೆಳಗುರುಳಿದ. ಯಾರೋ ದಾರಿಹೋಕರು ಎಚ್ಚರವಿಲ್ಲದ ಮಗುವನ್ನು ಎತ್ತಿ ತಂದು ಮನೆಗೆ ತಲುಪಿಸಿದರು. ಎಚ್ಚರವಾದ ಮೇಲೂ ಗದಾಧರನ ಮನಸ್ಸಲ್ಲಿ ಆ ಅಪೂರ್ವ ದೃಶ್ಯದಿಂದಾದ ಅನಿರ್ವಚನೀಯ ಆನಂದ ತುಂಬಿಕೊಂಡಿತ್ತು. ಆ ದಿವ್ಯಕ್ಷಣದಲ್ಲಿ ತಮಗಾದ ಸೌಂದರ್ಯಾನುಭವವೇ ತಮ್ಮನ್ನು ಹಂತ ಹಂತವಾಗಿ ಬ್ರಹ್ಮಾನುಭವದತ್ತ ಕರೆದೊಯ್ದಿತು ಎಂದು ಶ್ರೀ ರಾಮಕೃಷ್ಣರು ಶಿಷ್ಯರಿಗೆ ಹೇಳುತ್ತಿದ್ದರು.

ಇಂಥದೇ ಒಂದು ಪ್ರಸಂಗ ಆಂಗ್ಲ ಕವಿ ವರ್ಡ್ಸ್‌ವರ್ತ್ ನ ಬದುಕಿನಲ್ಲೂ ಕಾಣಿಸಿಕೊಂಡು, ಆತನ ಪ್ರಸಿದ್ಧ ಕವಿತೆ 'ದಿ ಡ್ಯಾಫೋಡಿಲ್ಸ್' ಎಂಬುದರ ಹುಟ್ಟಿಗೆ ಕಾರಣವಾಯಿತು. ಆತ ಒಮ್ಮೆ ಸರೋವರದ ಅಂಚಿನಲ್ಲಿ ನಡೆದು ಹೋಗುತ್ತಿದ್ದಾಗ ಯಾವುದೋ ಕಾರಣದಿಂದ ಆತನ ಮನಸ್ಸು ಮುದುಡಿತ್ತು. ಖಿನ್ನತೆಯಿಂದ ಅಂತರ್ಮುಖಿಯಾಗಿ, ಗೊತ್ತುಗುರಿಯಿಲ್ಲದೆ ನಡೆಯುತ್ತಿದ್ದಾಗ, ಆ ಸರೋವರದ ಒಂದು ಬದಿಯಲ್ಲಿ ಇದ್ದಕ್ಕಿದ್ದಂತೆ– ಬಂಗಾರದ ಬಣ್ಣದಿಂದ ತೊನೆದಾಡುತ್ತಿರುವ– ರಾಶಿ ರಾಶಿ ಡ್ಯಾಫೋಡಿಲ್ಸ್ ಹೂಗಳು ಕಾಣಿಸಿಕೊಂಡವು, ತುತ್ತೂರಿಯಾಕೃತಿಯ ಆ ಕೋಮಲ ನೆಲನೈದಿಲೆ ಪುಷ್ಪಗಳು ಎಂಥದೋ ನಿರ್ಮಲವಾದ ಹಿಗ್ಗಿನಿಂದ, ಸಂಭ್ರಮದಿಂದ ಗಾಳಿಯಲ್ಲಿ ಬಳುಕುತ್ತಾ ನರ್ತಿಸುತ್ತಿರುವಂತೆ ಕವಿಗೆ ಭಾಸವಾಯಿತು. ಸರೋವರದಲ್ಲಿ ಪುಟ್ಟ ಪುಟ್ಟ ಅಲೆಗಳು ಕುಣಿಯುತ್ತಿದ್ದವು. ಆ ಹೂವುಗಳು ಅಲೆಗಳೊಂದಿಗೆ ನಾಟ್ಯ ಸ್ಪರ್ಧೆ ನಡೆಸುತ್ತಿವೆಯೆಂದು ಕವಿ ಕಲ್ಪಿಸಿಕೊಂಡ. ತಾನು ಒಂಟಿಯಾಗಿ, ಮ್ಲಾನ ಮನಸ್ಕನಾಗಿ ಅಲೆಯುತ್ತಿರುವಾಗ, ಆ ಹೂವುಗಳು ಸಾಮೂಹಿಕವಾಗಿ ಆನಂದದಿಂದ ಕುಣಿದಾಡುತ್ತಿರುವುದನ್ನು ಕಂಡು, ಕವಿ ತನ್ನ ಖಿನ್ನತೆಯಿಂದ ಹೊರಬಂದ. ಮುಂದೆ, ತನ್ನ ಬದುಕಿನ ವಿಷಾದ ಗಳಿಗೆಗಳಲ್ಲಿ, ತಾನು ಆ ದಿನ ನೋಡಿದ ಡ್ಯಾಫೋಡಿಲ್ಸ್ ಪುಷ್ಪಗಳ ಸೌಂದರ್ಯ ಹಾಗೂ ಅವುಗಳಿಂದ ಹೊಮ್ಮುತ್ತಿದ್ದ ನಿರ್ಮಲ ಆನಂದವನ್ನು ನೆನಪಿಸಿಕೊಂಡು ವರ್ಡ್ಸ್‌ವರ್ತ್ ತನ್ನ ಖಿನ್ನತೆಯನ್ನು ದೂರ ಮಾಡುತ್ತಿದ್ದನಂತೆ.

ನಮ್ಮೆಲ್ಲರ ಬದುಕಿನಲ್ಲೂ ಒಂದಲ್ಲ ಒಂದು ಸಂದರ್ಭದಲ್ಲಿ ಇಂಥ 'ದಿವ್ಯಕ್ಷಣಗಳು' ಎದುರಾಗುತ್ತವೆ. ಆದರೆ ಅಂಥ ಕ್ಷಣಗಳನ್ನು ತೆರೆದ ಮನಸ್ಸಿನಿಂದ ಅನುಭವಿಸುವ ಸಾಮರ್ಥ್ಯ ನಮ್ಮಲ್ಲಿರಬೇಕು, ಅಷ್ಟೇ. ಗದಾಧರನಂತೆ, ವರ್ಡ್ಸ್‌ವರ್ತ್‌ನಂತೆ ಅವುಗಳನ್ನು 'ಭಾವಸ್ಥಿರ'ವಾಗಿ ಉಳಿಸಿಕೊಳ್ಳುವ ಮನೋಧರ್ಮವೂ ಇರಬೇಕು. ಅಂಥ ದಿವ್ಯಕ್ಷಣಗಳೇ ಕವಿ, ಕಲಾವಿದ, ವಿಜ್ಞಾನಿ, ಅನುಭಾವಿ, ಚಿಂತಕ – ಮುಂತಾದವರಲ್ಲಿ ಹೊಸ ಹೊಸ ಚಿಂತನೆ, ಭಾವನೆಗಳನ್ನು ಪ್ರಚೋದಿಸುತ್ತವೆ. ಸೇಬಿನ ಹಣ್ಣು ತೊಟ್ಟು ಕಳಚಿ ನೆಲಕ್ಕೆ ಬಿದ್ದಿದ್ದು ಸಾಮಾನ್ಯ ಘಟನೆಯೋ, ಸ್ನಾನ ಮಾಡುವಾಗ ತೊಟ್ಟಿಯ ನೀರು ಹೊರಕ್ಕೆ ಚೆಲ್ಲಿಹೋದಂಥ ಸಾಧಾರಣ ಸಂಗತಿಯೋ – ಗಹನವಾದ ವೈಜ್ಞಾನಿಕ ಪರಿಕಲ್ಪನೆಗಳ ಸಾಕ್ಷಾತ್ಕಾರಕ್ಕೆ ಕಾರಣವಾದುದು ಇಂಥ ದಿವ್ಯಕ್ಷಣಗಳಲ್ಲಿಯೇ, ಬೆಳಕಿನ ಬಿಂದುಗಳಂತೆ ಜೀವನದುದ್ದಕ್ಕೂ ನಮ್ಮ ಮನಸ್ಸಿನ ಕತ್ತಲನ್ನು ನಿವಾರಿಸುವ ಇಂಥ ಕ್ಷಣಗಳು ನಮ್ಮ ಪಾಲಿಗೆ ದೊರೆಯಬೇಕಾದರೆ, ನಮ್ಮ ಮನಸ್ಸು ಮುಕ್ತವಾಗಿರಬೇಕು. ನಮ್ಮ ಯೋಚನೆ, ಚಿಂತನೆಗಳು, ನಮ್ಮ ಸಂಕುಚಿತ ಜಗತ್ತಿನೊಳಗೇ ಮಿಸುಕಾಡುತ್ತಿದ್ದರೆ, ಅರ್ಥಾತ್ ನಮ್ಮದು ಸ್ವ–ಕೇಂದ್ರಿತ ವ್ಯಕ್ತಿತ್ವವಾಗಿದ್ದರೆ, ಇಂಥ ಅಭಿರುಚಿಯ ಕ್ಷಣಗಳು ನಮ್ಮ ಪಾಲಿಗೆ ಗಗನ ಕುಸುಮವಾಗಿಯೇ ಉಳಿಯುತ್ತವೆ. ನಮ್ಮ ಸುತ್ತಲಿನ ಜಗತ್ತನ್ನು ತೆರೆದ ಮನಸ್ಸಿನಿಂದ ಪರಿಭಾವಿಸುವ ಶಕ್ತಿ, ಸ್ಪಂದನಶೀಲತೆ ನಮ್ಮಲ್ಲಿದ್ದರೆ, ಈ ಜಗತ್ತು ನಿರ್ಮಲ ಆನಂದವನ್ನು ಅಯಾಚಿತವಾಗಿ ನಮಗೆ ಉಣಬಡಿಸುತ್ತದೆ. ಎಂಥದೋ ಹೂವಿನಲ್ಲಿ ಯಾವುದೋ ಹಕ್ಕಿಯ ಹಾಡಿನಲ್ಲಿ, ಮುಗ್ಧ ಮಗುವಿನ ನಿರ್ವ್ಯಾಜ ನಗೆಯಲ್ಲಿ, ತಾಯಿಯೊಬ್ಬಳ ವಾತ್ಸಲ್ಯದ ಮಾತುಗಳಲ್ಲಿ ಇಂಥ ಕ್ಷಣಗಳು ನಮಗೂ ಲಭ್ಯವಾಗುತ್ತವೆ. ಆಗ 'ಆನಂದಮಯ ಈ ಜಗಹೃದಯ; ಏತಕೆ ಭಯ ಮಾಣೋ!....' ಎಂಬ ಕವಿ ಕುವೆಂಪು ಅವರ ಉದ್ಗಾರ ನಮ್ಮದೂ ಆಗಿರುತ್ತದೆ.

■ **ವೈನತೇಯ**

## ಮಾತೇ ಮುತ್ತು

★ ಹಸಿವು ಒಂದು ರೋಗ ಎಂದು ತಿಳಿದುಕೋ. ಭಿಕ್ಷೆ ಸಿಕ್ಕಿದ್ದನ್ನು ಔಷಧಿ ಎಂದು ಸೇವಿಸು. ರೋಗಕ್ಕೆ ಎಷ್ಟು ಔಷಧಿ ಬೇಕೋ ಅಷ್ಟನ್ನೇ ಸೇವಿಸು. ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ.

–ಶಂಕರಾಚಾರ್ಯರು

★ ಕೊನೆಯಲ್ಲಿ ಉಳಿಯುವುದು ನಮ್ಮ ಶತ್ರುಗಳ ಮಾತಲ್ಲ; ಮಿತ್ರರ ಮೌನ.

–ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್

★ ಬಂದದ್ದೆಲ್ಲ ಬರಲಿ, ಹೋಗುವುದೆಲ್ಲ ಹೋಗಲಿ. ಉಳಿದದ್ದು ಏನು ಅನ್ನುವುದನ್ನು ನೋಡು.

–ರಮಣ ಮಹರ್ಷಿ

★ ಜೀವನದಲ್ಲಿ ನಮ್ಮ ಅಚ್ಚುಮೆಚ್ಚಿನ ವಸ್ತುವನ್ನು ಖರೀದಿಸಲು ಯಾವುದೇ ಹಣ ನೀಡಬೇಕಿಲ್ಲ. ಅತ್ಯಂತ ಅಚ್ಚುಮೆಚ್ಚಿನ ವಸ್ತು ಎಂದರೆ ಸಮಯ.

–ಸ್ಟೀವ್ ಜಾಬ್ಸ್

★ ಪ್ರತಿಯೊಂದರಲ್ಲೂ ಸೌಂದರ್ಯವಿದೆ. ಆದರೆ ಪ್ರತಿಯೊಬ್ಬರೂ ಅದನ್ನು ನೋಡುವುದಿಲ್ಲ.

–ಕನ್‌ಫ್ಯೂಶಿಯಸ್

★ ಶಿಕ್ಷಣದ ಬೇರುಗಳು ಕಹಿಯಾಗಿವೆ. ಆದರೆ ಹಣ್ಣುಗಳು ಮಾತ್ರ ಬಲು ಸಿಹಿ.

–ಅರಿಸ್ಟಾಟಲ್

★ ಜೀವನ ಎಷ್ಟೇ ಕಷ್ಟವಾಗಿರಲಿ, ಅಲ್ಲಿ ಯಾವತ್ತೂ ನೀವು ಮಾಡಬೇಕಾದದ್ದು ಮತ್ತು ಸಾಧಿಸಬೇಕಾದದ್ದು ಏನಾದರೂ ಇದ್ದೇ ಇದೆ.

–ಸ್ಟೀಫನ್ ಹಾಕಿಂಗ್

★ ಸತ್ಯದ ದಾರಿಯಲ್ಲಿ ಮನುಷ್ಯನೊಬ್ಬ ಮಾಡಬಹುದಾದ ತಪ್ಪುಗಳು ಎರಡೇ. ಒಂದೋ ಆತ ದಾರಿಯನ್ನು ಪೂರ್ತಿ ಕ್ರಮಿಸಲಾರ. ಇಲ್ಲವೇ ದಾರಿಯಲ್ಲಿ ನಡೆಯುವುದನ್ನು ಆರಂಭಿಸಿಯೇ ಇರಲಾರ.

–ಗೌತಮ ಬುದ್ಧ

★ ಇವತ್ತಿನ ಕೆಲಸವನ್ನು ತಡೆಯುವುದರಿಂದ ನೀವು ನಾಳೆಯ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ.

–ಅಬ್ರಹಾಂ ಲಿಂಕನ್

★ ನದಿ, ಕೆರೆ, ಸರೋವರ, ತೊರೆ– ಎಲ್ಲ ಹೆಸರುಗಳು ಬೇರೆ, ಆದರೆ ಅವುಗಳಲ್ಲಿ ಇರುವುದು ನೀರೇ. ವಿವಿಧ ಧರ್ಮಗಳೂ ಹಾಗೆಯೇ, ಮನುಷ್ಯನ ಒಳಿತಿನ ಬಗ್ಗೆಯೇ ಮಾತನಾಡುತ್ತವೆ.

–ಬಾಕ್ಸಿಂಗ್ ಚಾಂಪಿಯನ್ ಮೊಹಮ್ಮದ್ ಅಲಿ

★ ಪ್ರೀತಿ ಎನ್ನುವುದು ಬಹಳ ಗಂಭೀರವಾದ ಮಾನಸಿಕ ಕಾಯಿಲೆ.

–ಪ್ಲೇಟೋ

★ ಇಂದು ಮಾಡಬಹುದಾದದ್ದನ್ನು ನಾಳೆಗೆ ಮುಂದೂಡಲೇಬೇಡಿ.

–ಥಾಮಸ್ ಜೆಫರ್ಸನ್